

# ಕಪ್ಪೆ ಮೂತಿಯ ನಿಶಾಚರಿ ಹಕ್ಕಿ

**ಕಪ್ಪೆಯಂತೆಯೇ ಮುಖ ಸ್ವರೂಪವಿರುವ ವಿಶಿಷ್ಟ ನಿಶಾಚರಿ ಪಕ್ಷಿ ‘ಫ್ರಾಗ್‌ಮೌತ್’, ಗೂಬೆ ಮತ್ತು ನೈಟ್‌ಜಾರ್ ಪಕ್ಷಿಗಳ ಹತ್ತಿರದ ಸಂಬಂಧಿ.**

■ ಕೆ. ರಾಮಕೃಷ್ಣ

ಶಿವಮೊಗ್ಗದ ತೀರ್ಥಹಳ್ಳಿಗೆ ತಾಗಿಕೊಂಡಿರುವ ಭಾರತೀಪುರ ಸಮೀಪದ ಕಾಡಿಗೆ ನಿಶಾಚರಿ ಪಕ್ಷಿ ‘ನೈಟ್‌ಜಾರ್’ (ಇದರಲ್ಲಿ ವಿವಿಧ ಪ್ರಭೇದಗಳಿವೆ) ಹುಡುಕಿಕೊಂಡು ಹೊರಟೆವು. ಜೆರ್ಡಾನ್ ನೈಟ್‌ಜಾರ್ ಪಕ್ಷಿಯ ಧ್ವನಿ ಆಸುಪಾಸಿನಲ್ಲಿಯೇ ಕೇಳುತ್ತಿತ್ತಾದರೂ ಎಷ್ಟು ಹೊತ್ತಾದರೂ ದರ್ಶನ ನೀಡಲೇ ಇಲ್ಲ.

ಬಂದ ದಾರಿಗೆ ಸುಂಕವಿಲ್ಲ ಎಂದುಕೊಳ್ಳುತ್ತಿರುವಾಗಲೇ ಚುಸ್ಸುಸ್ ಎಂಬ ವಿಶಿಷ್ಟ ಶಬ್ದದೊಂದಿಗೆ ಪಕ್ಷಿಯೊಂದು ತಲೆಯ ಮೇಲೆ ಹಾರಿಹೋಯಿತು. ಪಕ್ಷಿಗಳ ಧ್ವನಿ, ಸ್ವಭಾವಗಳ ಕುರಿತು ತಿಳಿವಳಿಕೆ ಇರುವ ಗೆಳೆಯರಿಬ್ಬರೂ ಇದು ‘ಶ್ರೀಲಂಕಾ ಫ್ರಾಗ್‌ಮೌತ್’ (ಕಪ್ಪೆ ಬಾಯಿ) ಪಕ್ಷಿಯೆಂದೂ, ಮರದ ಟೊಂಗೆಯಲ್ಲಿ ಕುಳಿತು ದರ್ಶನ ಕೊಡುತ್ತದೆ ಎಂದು ತಿಳಿಸಿ, ಅದನ್ನು ನೋಡುವ ಕುತೂಹಲ ಮೂಡಿಸಿದರು.

ಅವರ ಎಣಿಕೆ ತಪ್ಪಾಗಲಿಲ್ಲ. ಹತ್ತಿರದ ಮರದ ಟೊಂಗೆಯಲ್ಲಿ ಕುಳಿತ ಪಕ್ಷಿ ದೂರದ ಸಂಗಾತಿಯ ಧ್ವನಿಗೆ ದನಿ ಸೇರಿಸತೊಡಗಿತು. ಅಚ್ಚರಿ ಎಂದರೆ ಪಕ್ಷಿಗಳು ಸ್ವಲ್ಪ ಸದ್ದು ಕೇಳಿತೆಂದರೆ ತಕ್ಷಣ ಜಾಗ ಖಾಲಿ ಮಾಡುತ್ತವೆ. ನಮ್ಮ ಮೆಲುಮಾತು, ಕ್ಯಾಮೆರಾ ಷಟರ್ ಸದ್ದು, ಬ್ಯಾಟರಿಯ ಬೆಳಕು ಇದ್ಯಾವುದಕ್ಕೂ ಈ ಪಕ್ಷಿ ವಿಚಲಿತಗೊಳ್ಳಲಿಲ್ಲ. ಕುಳಿತಲ್ಲಿಂದ ಮಿಸುಕಾಡಲಿಲ್ಲ.

ಸರತಿಯಂತೆ ಒಬ್ಬೊಬ್ಬರು ಬ್ಯಾಟರಿ ಹಿಡಿದು ಪಕ್ಷಿಯ ಪಟಗಳನ್ನು ತೆಗೆದೆವು. ಕುಳಿತಲ್ಲಿಂದ ಕದಲದೇ ನಮ್ಮೆಲ್ಲರಿಗೂ ಫೋಟೊ ತೆಗೆಯಲು ಅವಕಾಶವಿತ್ತ ಪಕ್ಷಿಗೆ ಮನದಲ್ಲೇ ಧನ್ಯವಾದ ತಿಳಿಸಿ ಮರಳಿ ಮನೆಯ ದಾರಿ ಹಿಡಿದೆವು. ಊರಿಗೆ ತಾಗಿಕೊಂಡಿರುವ ಈ ವನ ಪ್ರದೇಶದ ಹಿಂಭಾಗದ ಗುಡ್ಡವನ್ನು ಸಮತಟ್ಟು ಮಾಡಿ ಲೇಔಟ್ ನಿರ್ಮಿಸುವ ಕಾಮಗಾರಿಗೆ ಈಗಾಗಲೇ ಚಾಲನೆ ಸಿಕ್ಕಿದೆ. ಅಪರೂಪದ ಈ ಖಗ ಸಂಪತ್ತು ಅಲ್ಲಿಂದ ಕಣ್ಮರೆಯಾಗುವ ದಿನಗಳು ದೂರವಿಲ್ಲವೆಂಬ ವಿಷಾದದೊಂದಿಗೆ ಮರಳಿದೆವು.

ವಿಶ್ವದಾದ್ಯಂತ ಸುಮಾರು 15 ಪ್ರಭೇದದ ಫ್ರಾಗ್‌ಮೌತ್ ಪಕ್ಷಿಗಳು ನೆಲೆಸಿವೆ. ಇವು ಪೋಡಾರ್ಗಿಡೇ (Poargidae) ಎಂಬ ವೈಜ್ಞಾನಿಕ ಹೆಸರುಳ್ಳ ಬಾಟ್ರಾಕೋಸ್ಟೋಮಸ್ (Batrachosomus) ಕುಟುಂಬ ವರ್ಗಕ್ಕೆ ಸೇರಿವೆ. ಗೂಬೆ ಮತ್ತು ನೈಟ್‌ಜಾರ್ ಪಕ್ಷಿಗಳ ಹತ್ತಿರದ ಸಂಬಂಧಿಯೆಂದೂ ಹೇಳಲಾಗುತ್ತದೆ. ಶ್ರೀಲಂಕಾ ಫ್ರಾಗ್‌ಮೌತ್ ಪಕ್ಷಿಗಳು ಶ್ರೀಲಂಕಾ, ಭಾರತದ ಕೇರಳ, ಪಶ್ಚಿಮಘಟ್ಟ ಮತ್ತು ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಕಂಡುಬರುತ್ತವೆ. ನಿಶಾಚರಿಗಳಾದ ಇವು ಮರದ ಕೊಂಬೆಯ ತುದಿಯಲ್ಲಿ ಕುಳಿತು ಬೇಟೆಗೆ ಹೊಂಚು ಹಾಕುತ್ತವೆ. ಕಣ್ಣೆದುರೇ ಕೊಂಬೆಯ ಮೇಲೆ ಈ ಪಕ್ಷಿ ಕುಳಿತಿದ್ದರೂ ಕೊಂಬೆಯ ಬಣ್ಣವನ್ನೇ ತಳೆಯುವ ವೇಷಾಂತರಿಗಳು ಆಗುವುದರಿಂದ ಒಮ್ಮೆಗೇ ಗೋಚರಿಸದೇ ಮುರಿದ ಕೊಂಬೆಯೋ, ಮತ್ತೇನೋ ಎಂಬ ಭ್ರಮೆ ಉಂಟಾಗುತ್ತದೆ.



ಪ್ರತಿಯೊಂದು ಪಕ್ಷಿಯೂ ಪ್ರತ್ಯೇಕ ರೂಸ್ಟ್ (ವಾಸಸ್ಥಾನ) ಹೊಂದಿದ್ದು, ಅವು ಕಾಯಂ ಅಲ್ಲೇ ನೆಲೆಸುತ್ತವೆ. ತಮ್ಮ ನೆಲೆಯಲ್ಲಿ ಅಪಾಯ ಕಾದಿದೆ ಎಂದರಿತಾಗ ಮೆಲ್ಲನೆ ತಲೆಯಾಡಿಸುತ್ತಾ ಕೊಕ್ಕನ್ನು ಮೇಲ್ಮುಖ ಮಾಡಿ ಕೂಗಲಾರಂಭಿಸುತ್ತವೆ. ಇವುಗಳ ಪ್ರಮುಖ ಆಹಾರ ಕೀಟ, ಜೇಡ, ಗೊಂಡೆ ಹುಳ ಇತ್ಯಾದಿ. ಕೆಲವೊಮ್ಮೆ ಕಪ್ಪೆ, ಸರೀಸೃಪ, ಚಿಕ್ಕ ಸಸ್ತನಿಗಳನ್ನೂ ಭಕ್ಷಿಸುತ್ತವೆ. ಪ್ರಧಾನ ಆಹಾರವಾಗಿರುವ ಕೀಟಗಳನ್ನು ಗಾಳಿಯಲ್ಲೇ ಬೇಟೆಯಾಡುತ್ತವೆ. ಗಂಡಿಗಿಂತ ಹೆಣ್ಣಿನ ಧ್ವನಿ ಮಿಗಿಲು. ದೊಡ್ಡದಾಗಿ ಆರಂಭಿಸಿ ಕ್ರಮೇಣ ಹಿಸ್ ಹಿಸ್ ಎಂದು ಧ್ವನಿಯನ್ನು ನಿಯಂತ್ರಿಸಿ ಕೂಗುತ್ತವೆ. ರಾತ್ರಿ ನೀರವ ಮೌನದಲ್ಲಿ ಇವುಗಳ ವಿಚಿತ್ರ ಕೂಗು ಹೊಸಬರಿಗೆ ಭಯ ಹಾಗೂ ತಲ್ಲಣ ಉಂಟು ಮಾಡುವುದಂತೂ ಖಚಿತ!

ಕಪ್ಪೆಯ ಮೂತಿಯಂತೆ ಮುಖ ಸ್ವರೂಪವಿರುವುದರಿಂದ ‘ಫ್ರಾಗ್‌ಮೌತ್’ ಎಂಬ ಅನ್ವರ್ಥನಾಮ ಇದಕ್ಕೆ ಸಂದಿದೆ. ಭಾರತದಲ್ಲಿ ಜನವರಿಯಿಂದ ಏಪ್ರಿಲ್‌ವರೆಗೆ ಮತ್ತು ಶ್ರೀಲಂಕಾದಲ್ಲಿ ಫೆಬ್ರುವರಿ, ಮಾರ್ಚ್‌ವರೆಗೆ ಸಂತಾನೋತ್ಪತ್ತಿಯಲ್ಲಿ ನಿರತವಾಗುತ್ತವೆ.

ಪ್ರತಿಕ್ರಿಯಿಸಿ: feedback@sudha.co.in